ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ನೀಡಿರುವ ಹಣದ ವಿವರ ಈ ಕೆಳಕಂಡಂತಿದೆ.

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಒಟ್ಟು
1989-90	33.00ಲಕ್ಷ	4.40 ಲಕ್ಷ	37.40 ಲಕ್ಷ
1990-91	41.47ಲಕ್ಷ	4.59ಲಕ್ಷ	45.76 ಲಕ್ಷ
1991-92 (ಆಂಟಿಸಿಪೇಟೆಡ್)	40.62ಲಕ್ಷ	3.80ಲಕ್ಷ	44.42 ಲಕ್ಷ
ಒಟ್ಟು	114.79	12.79	127.58

ವಿಷಯ:ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ನಿರುದ್ಯೋಗಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1359 (2012)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಉದ್ಯೋಗ ವಿನಿಮಯ ಕಛೇರಿ ಹಾಗು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಒಟ್ಟು ನಿರುದ್ಯೋಗಿ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? (ಇವತ್ತಿನ ಹಾಗೂ ವರ್ಗವಾರು ಮಾಹಿತಿ ನೀಡುವುದು?)

ಆ) ಕಳೆದು ಮೂರು ವರ್ಷಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ ?

ಇ) ಈ ನಿರುದ್ಯೋಗಿ ಯುವಕರಿಗೆ ಸಾಕಷ್ಟು ಉದ್ಯೋಗ ದೊರಕಿಸಲು ನಿಖರವಾದ ಯೋಜನೆಗಳೇನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)

ಅ) 1991ನೇ ಡಿಸಂಬರ್ ಅಂತ್ಯಕ್ಕೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 14,23,280

ಬೀದರ್ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ 35,772

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ	ಪ. ಜಾತಿ 1,59,450	ಪ.ಪಂ. 19,530
ಬೀದರ್ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ	6,931	35

ಇ) 30,905

ಈ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರಿಗೆ ಉದ್ಯೋಗ ಒದಗಿಸಲು ಯಾವುದೇ ವಿಶಿಷ್ಟ ಕಾರ್ಯಕ್ರಮವು ಇರುವುದಿಲ್ಲ. ವಿವಿಧ ನೇಮಕಾತಿ ಮೂಲಗಳಿಂದ ಆಗಿಂದಾಗ್ಗೆ ಬರುವ ಬೇಡಿಕೆಗಳಿಗೆ ನೋಂದಾಯಿಸಿಕೊಂಡ ಅಭ್ಯರ್ಥಿಗಳ ಹೆಸರನ್ನು ಕಳುಹಿಸಿಕೊಡಲಾಗುತ್ತಿದೆ.